

‘ರಾಜ್ ಫ್ರಂ ರಾಜಣ್ಣ’ – ಕೋಲಾಜ್ ಕಲಾಕೃತಿ

ಅಚ್ಚುಮೆಚ್ಚಾಗಿ, ನನ್ನ ಮುಂದೆ ಏನಿದೆ ಅದನ್ನು ಮಾತ್ರ ಅಭಿವ್ಯಕ್ತಿಗೊಳಿಸುವ ಗುಣ ನನ್ನಲ್ಲಿ ಮೂಲದಲ್ಲಿಯೇ ಇತ್ತೋ ಅಥವಾ ಅದು ಸುಲಭವೆಂದು ರೂಢಿಯಾಯಿತೋ ಗೊತ್ತಿಲ್ಲ. ಪರಿಣಾಮವಾಗಿ, ನನ್ನಲ್ಲಿ ಸೃಜನಶೀಲತೆ ಅನ್ನೋದು ಊನವಾಯಿತು ಎಂದು ನನ್ನ ನಂಬುಗೆ. ಹಾಗಾಗಿ ಸ್ಮರಣ ಚಿತ್ರಣ, ಚಿತ್ರ ಸಂಯೋಜನೆ, ಆಧುನಿಕ ಕಲೆಗಳಂಥ ಆಲೋಚನೆಗೆ ಹಚ್ಚುವ ವಿಷಯದ ಕಲಾಕೃತಿಗಳು ನನ್ನಿಂದ ಹೇಳಿಕೊಳ್ಳುವಂತೆ ಮೂಡಿಬರಲಿಲ್ಲ.

ಸರಿ ಸುಮಾರು ಮೂರು ದಶಕದ ಕಾಲಾವಧಿ ಸರಿದು ಹೋಗಿದ್ದರೂ ಚಿತ್ರ ರಚನೆಯ ನನ್ನ ಸ್ವಭಾವದಲ್ಲಿ ಹೆಚ್ಚಿನ ಬೆಳವಣಿಗೆ ಏನೂ ಆಗಿಲ್ಲ. ‘ಭಾವಚಿತ್ರ ರಚನೆ’ ಅಂದರೆ ನನಗೆ ಈಗಲೂ ಹಿಗ್ಗು. ವ್ಯಕ್ತಿಯ ತದ್ರೂಪು ತರುವುದು ನನ್ನ ಮೊದಲ ಆದ್ಯತೆ. ಅದರಲ್ಲಿ ಪರಿಚಿತರನ್ನು